## <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

## <u>Spl.C. 78/2019</u>

**P.W.-8**
**C.W.-17**

ಹೆಸರು : ಹೆಚ್ ಎಲ್ ವಿನಯ್

ತಂದೆಯ ಹೆಸರು : ನಾಗರಾಜು

ವಯಸ್ಸು : 44 ವರ್ಷ

ಉದ್ಯೋಗ : ಪೋಲೀಸ್ ಇನ್ಸ್ ಪೆಕ್ಟರ್ , ಕೇಂದ್ರ ಕಛೇರಿ , ಬೆಂಗಳೂರು

ವಾಸಸ್ಥಳ : ಮೈಸೂರು

**<u>ದಿನಾಂಕಃ 05.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

ನಾನು ಆಗಸ್ಟ 2016 ರಿಂದ ಜನವರಿ 2019 ರವರೆಗೆ ಮೈಸೂರು ಎಸಿಬಿ ಪೋಲೀಸ್ ಠಾಣೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 14.07.2017 ರಂದು ಚಾ.ಸಾ. 16 ರವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾಹಿತಿ ನೀಡಿ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನು ತಯಾರಿಸಲು ಹೇಳಿದ ಮೇರೆಗೆ ನಾನು ಒಂದು ಗಾಜಿನ ಬೌಲ್ ನಲ್ಲಿ ಡಿಸ್ಟಿಲ್ ವಾಟರ್ ಮತ್ತು ಸೋಡಿಯಂ ಕಾರ್ಬೋನೇಟ್ ಪೌಡರ್ ಹಾಕಿ ಧ್ರಾವಣವನ್ನು ತಯಾರಿಸಿರುತ್ತೇನೆ. ಅದರಲ್ಲಿ ಸ್ಯಾಂಪಲ್ ಗಾಗಿ ಒಂದು ಗಾಜಿನ ಬಾಟಲಿಯಲ್ಲಿ ಧ್ರಾವಣವನ್ನು

ಶೇಖರಿಸಿರುತ್ತೇನೆ. ನಂತರ ಪಂಚ ಸಾಕ್ಷಿ ಚಾ,ಸಾ. 2 ರವರ ಎರಡೂ ಕೈ ಬೆರಳುಗಳನ್ನು ಆ ಧ್ರಾವಣದಲ್ಲಿ ಅದ್ದಿ ತೊಳೆಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಗಾಜಿನ ಬಾಟಲಿನಲ್ಲಿ ಶೇಖರಿಸಿ , ತನಿಖಾಧಿಕಾರಿಯವರಿಗೆ ನೀಡಿದ್ದು , ಅವರು ಅವರ ಸಹಿ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿ ನಂತರ ಅಮಾನತ್ತು ಪಡಿಸಿಕೊಂಡಿರುತ್ತಾರೆ.

3. ಟ್ರಾಪ್ ಕಾಲಕ್ಕೆ ತನಿಖಾಧಿಕಾರಿಯವರು ಮತ್ತು ಸಿಬ್ಬಂದಿಯವರೊಂದಿಗೆ ನಾನೂ ಸಹ ಮೈಸೂರು ತಾಲ್ಲೂಕು ಕಛೇರಿಗೆ ಹೋಗಿರುತ್ತೇನೆ. ಈ ಬಗ್ಗೆ ನನ್ನ ಹೇಳಿಕೆಯನ್ನು ಚಾ,ಸಾ. 16 ರವರು ದಾಖಲಿಸಿಕೊಂಡಿರುತ್ತಾರೆ. ಅದೇ ದಿನ ಚಾ,ಸಾ. 16 ರವರು ಅವರಿಗೆ ಬೇರೆ ಪ್ರಕರಣದ ತನಿಖೆ ಬಾಕಿ ಇದ್ದುದ್ದರಿಂದ, ಈ ಪ್ರಕರಣದ ತನಿಖೆಯನ್ನು ಮುಂದುವರೆಸುವಂತೆ ನನಗೆ ಒಂದು ಜ್ಞಾಪನವನ್ನು ನೀಡಿರುತ್ತಾರೆ. ಸದರಿ ಜ್ಞಾಪನವನ್ನು ಈಗ ನೋಡುತ್ತಿದ್ದೇನೆ . ಅದನ್ನು ನಿಪಿ 27 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 27(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

4. ನಂತರ , ನಾನು ಮೈಸೂರು ತಾಲ್ಲೂಕು ತಹಸೀಲ್ದಾರ್ ರವರಿಗೆ ಪತ್ರಿಸಿ ಕಛೇರಿಯಲ್ಲಿ ಸಿಸಿ ಕ್ಯಾಮರಾವನ್ನು ಅಳವಡಿಸಿರುವ ಬಾಬ್ತು ಮಾಹಿತಿಯನ್ನು ನೀಡಬೇಕೆಂದು ಕೋರಿದ್ದು , ಅದರಂತೆ ಅವರು ಸದರಿ ಮಾಹಿತಿಯನ್ನು ನೀಡಿದ್ದು , ದಿಃ 21.07.2017 ರಂದು ಆ ಮಾಹಿತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಾನು ಬರೆದ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ 28 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 28(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ನಾನು ಅವರಿಂದ ಪಡೆದ ಪತ್ರವನ್ನು

ನೋಡುತ್ತಿದ್ದೇನೆ. ಅದನ್ನು ನಿಪಿ 29 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 29(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿಯವರ ಪತ್ರದಲ್ಲಿ ಕಛೇರಿಗೆ ಅಳವಡಿಸಲಾಗಿದ್ದ ಸಿಸಿ ಕ್ಯಾಮರಾದಲ್ಲಿ ದೃಶ್ಯಾವಳಿಗಳು ಲಭ್ಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ದಿಃ 19.07.2017 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾಗಿದ್ದ ಸಿಡಿ ಗಳನ್ನು ಎಫ್ ಎಸ್ ಎಲ್ ಗೆ ಧ್ವನಿ ವಿಶ್ಲೇಷಣಾ ವರದಿಗಾಗಿ ಮತ್ತು ಅಮಾನತ್ತು ಪಡಿಸಿಕೂಂಡಿದ್ದ ಆರೋಪಿಯ ಕೈ ಬೆರಳುಗಳನ್ನು ಅದ್ದಿಸಿ ತೊಳೆದ ಗುಲಾಬಿ ಬಣ್ಣಕ್ಕೆ ತಿರುಗಿದ್ದ ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನು ರಾಸಾಯನಿಕ ಪರೀಕ್ಷಗಾಗಿ ಎಫ್ ಎಸ್ ಎಲ್ ಗೆ ಕಳುಹಿಸುವ ಸಂಬಂಧ ಹಿರಿಯ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರ ಮತ್ತು ಅಡಕಗಳು ಪುಟ ಸಂಖ್ಯೆ 65 ರಿಂದ 69 ರವರೆಗೆ ಇದ್ದು, ಅವುಗಳನ್ನು ಒಟ್ಟಾಗಿ ನಿಪಿ 30 ಎಂದು ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 69 ರಲ್ಲಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 30(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು. ರಾಸಾಯನಿಕ ಪರೀಕ್ಷಾ ವರದಿಯನ್ನು ನಾನು ದಿಃ 11.09.2017 ರಂದು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದೇನೆ. ಅದು ಪುಟ ಸಂಖ್ಯೆ 81 ರಲ್ಲಿ ಇರುತ್ತದೆ. ಅದನ್ನು ನಾನು ಪಡೆದ ಬಗ್ಗೆ ನನ್ನ ಸಹಿ ಇರುತ್ತದೆ. ಸದರಿ ವರದಿಯನ್ನು ನಿಪಿ 31 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 31(ಎ) ಎಂತಲು ಗುರುತುಪಡಿಸಿಕೂಳ್ಳಲಾಯಿತು.

6. ದಿಃ 19.07.2017 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೂಡುವಂತೆ ಎಇಇ , ಪಿಡಬ್ಲೂಡಿ ಯವರಿಗೆ ಷತ್ರಿಸಿರುತ್ತೇನೆ. ಅದರಂತೆ ಅವರು ದಿಃ

10.10.2017 ರಂದು ಒಂದು ಪತ್ರವನ್ನು ಕಳುಹಿಸಿ ಅದರಲ್ಲಿ ಎಇ ರವರು ಸ್ಥಳ ಪರಿಶೀಲನೆಗಾಗಿ ದಿಃ 16.10.2017 ರಂದು ಬರುತ್ತಾರೆ ಎಂದು ತಿಳಿಸಿದ್ದರು. ದಿಃ 11.10.2017 ರಂದು ಪಂಚ ಸಾಕ್ಷಿ 2 ನಾಗರಾಜು ರವರಿಗೆ ಪತ್ರಿಸಿ, ದಿಃ 16.10.2017 ರಂದು ತನಿಖೆಯ ಸಂಬಂಧ ಕಛೇರಿಗೆ ಹಾಜರಾಗಬೇಕು ಎಂದು ತಿಳಿಸಿರುತ್ತೇನೆ. ಈ ಪತ್ರ ಮತ್ತು ದಾಖಲಾತಿಗಳು ಪುಟ ಸಂಖ್ಯೆ 83 ರಿಂದ 85 ರವರೆಗೆ ಇದ್ದು, ಇವುಗಳನ್ನು ಒಟ್ಟಾಗಿ ನಿಪಿ 32 ಎಂದು ಈಗ ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 86 ರಲ್ಲಿ ನಕಾಶೆ ಇದ್ದು , ಅದನ್ನು ನಿಪಿ 33 ಎಂದು ಗುರುತುಪಡಿಸಿಕೊಳ್ಳಲಾಯಿತು. ನಿಪಿ 33 ರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 33(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

7. ದಿಃ 16.10.2017 ರಂದು ಎಇ ಗಿರೀಶ್ ಮತ್ತು ಪಂಚ ಸಾಕ್ಷಿ 2 ಮತ್ತು ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಎಇ ರವರು ಸ್ಥಳವನ್ನು ಪರಿಶೀಲಿಸಿ ಕಛ್ಛಾ ನಕಾಶೆಯನ್ನು ಸಿದ್ಧಪಡಿಸಿಕೂಂಡರು. ದಿಃ 24.10.2017 ರಂದು ತಾವು ತಯಾರಿಸಿದ ನಕಾಶೆಯನ್ನು ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಈಗಾಗಲೇ ನಿಪಿ 33 ಎಂದು ಗುರುತುಪಡಿಸಿಕೊಳ್ಳಲಾಗಿದೆ.

8. ದಿಃ 20.11.2017 ರಂದು ತನಿಖೆಯನ್ನು ಮುಂದುವರಿಸಿ ಆರೋಪಿ ಮತ್ತು ದೂರುದಾರರು ಸಂಭಾಷಣೆಯನ್ನು ನಡೆಸಿದ ಬಾಬ್ತು ಅವರ ಮೊಬೈಲ್ ಕರೆಯ ವಿವರಗಳನ್ನು ನೀಡುವಂತೆ ಸಮುಚಿತ ಮಾರ್ಗದಲ್ಲಿ ಸಂಬಂಧಪಟ್ಟ ನೆಟ್ ವರ್ಕ ನ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ.

9. ದಿಃ 21.05.2018 ರಂದು , ತಹಸೀಲ್ದಾರ್ , ಮೈಸೂರು ರವರಿಗೆ ಆರೋಪಿಯ ಸೇವಾ ವಿವರದ ದಾಖಲಾತಿಯನ್ನು ನೀಡುವಂತೆ ಪತ್ರಿಸಿದ್ದು , ದಿಃ 10.07.2018 ರಂದು ಸದರಿ

ದಾಖಲಾತಿಯನ್ನು ಪಡೆದಿರುತ್ತೇನೆ. ಪುಟ ಸಂಖ್ಯೆ 87 ರಲ್ಲಿರುವ ಸಾಕ್ಷಿ ಬರೆದ ಪತ್ರವನ್ನು ನಿಪಿ 34 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 34(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಆರೋಪಿಯ ಸೇವಾ ವಿವರ ಪುಟ ಸಂಖ್ಯೆ 89 ರಿಂದ ಪುಟ ಸಂಖ್ಯೆ 94 ರವರೆಗೆ ಇದ್ದು, ಆ ಪುಟಗಳನ್ನು ಒಟ್ಟಾಗಿ ನಿಪಿ 35 ಎಂದು ಗುರುತುಪಡಿಸಿಕೊಳ್ಳಲಾಯಿತು.

10. ದಿಃ 31.07.2018 ರಂದು ತಹಸೀಲ್ದಾರ್ ಮೈಸೂರು ರವರಿಗೆ ಪತ್ರಿಸಿ ಆರೋಪಿಯ ಕಾರ್ಯ ವ್ಯಾಪ್ತಿ ಮತ್ತು ಕೆಸರೇ ಗ್ರಾಮದ ಸರ್ವೆ ನಂ. 610/6 ಮತ್ತು 610/4 ಕ್ಕೆ ಆರೋಪಿಯ ಕಾರ್ಯವ್ಯಾಪ್ತಿ ಒಳಪಡುತ್ತದೆಯೇ ಎಂಬ ಬಗ್ಗೆ ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ದಿಃ 18.08.2018 ರಂದು ಸ್ವೀಕರಿಸಿರುತ್ತೇನೆ. ಪುಟ ಸಂಖ್ಯೆ 113 ರಲ್ಲಿ ಸಾಕ್ಷಿ , ತಹಸೀಲ್ದಾರ್ ರವರಿಗೆ ಬರೆದ ಪತ್ರವಾಗಿದ್ದು, ಅದನ್ನು ನಿಪಿ 36 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 36(ಎ) ಎಂತಲು, ತಹಸೀಲ್ದಾರ್ ನೀಡಿದ ದಾಖಲಾತಿಗಳು ಪುಟ ಸಂಖ್ಯೆ 114 ಮತ್ತು 115 ರಲ್ಲಿ ಇದ್ದು, ಅವುಗಳನ್ನು ಈಗ ನಿಪಿ 37 ಎಂದು ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 114 ರಲ್ಲಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 37(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 116 ರಿಂದ 120 ರವರೆಗಿನ ದಾಖಲೆಗಳನ್ನು ಈಗಾಗಲೇ ನಿಡಿ 4 ಎಂದು ಗುರುತುಪಡಿಸಿಕೊಳ್ಳಲಾಗಿದೆ.

11. ದಿಃ 31.07.2018 ರಂದು ಮಾನ್ಯ ತಹಸೀಲ್ದಾರ್ , ಪಿರಿಯಾಪಟ್ಟಣ ರವರಿಗೆ ಪತ್ರಿಸಿ , ಆರೋಪಿಯ ಸೇವಾ ವಹಿಯ ದೃಡೀಕರಣ ಪತ್ರವನ್ನು ನೀಡಬೇಕೆಂದು ಕೋರಿರುತ್ತೇನೆ.

ಸದರಿ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದು ಪುಟ ಸಂಖ್ಯೆ 121 ರಲ್ಲಿ ಇದ್ದು , ಅದನ್ನು ಈಗ ನಿಪಿ 38 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 38(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

12. ದಿಃ 03.08.2018 ರಂದು ತಹಸೀಲ್ದಾರ್ ಪಿರಿಯಾಪಟ್ಟಣ ರವರು ಮಾಹಿತಿಯನ್ನು ಒದಗಿಸಿದ್ದು , ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅವು ಪುಟ ಸಂಖ್ಯೆ 122 ರಿಂದ 154 ರವರೆಗೆ ಇದ್ದು , ಅವುಗಳನ್ನು ಒಟ್ಟಾಗಿ ನಿಪಿ 39 ಎಂತಲು, ಪುಟ ಸಂಖ್ಯೆ 122 ರಲ್ಲಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 39(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

13. ದಿಃ 21.08.2018 ರಂದು ಪ್ರಕರಣ ಫಿರ್ಯಾದಿಯವರಿಗೆ ಲಂಚದ ಹಣಕ್ಕೆ ಬದಲಿಯಾಗಿ ಚೆಕ್ಕನ್ನು ನೀಡಿರುತ್ತೇನೆ ಮತ್ತು ಅವರಿಂದ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸ್ವೀಕೃತಿ ಪುಟ ಸಂಖ್ಯೆ 156 ರಲ್ಲಿ ಇದ್ದು , ಅದನ್ನು ಈಗ ನಿಪಿ 40 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 40(ಎ) ಎಂತಲು, ಸಾಕ್ಷಿ ಗುರುತಿಸಿದ ಫಿರ್ಯಾದುದಾರರ ಸಹಿಯನ್ನು ನಿಪಿ 40 ಬಿ ಎಂತಲು ಗುರುತುಪಡಿಸಿಕೊಳ್ಳಲಾಯಿತು.

14. ಈ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾ,ಸಾ. 8,10,2,6,7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಠಾಣಾ ಸಿಬ್ಬಂದಿಗಳಾದ ಚಾ,ಸಾ. 13, 9 ಮತ್ತು 12 ರವರಿಂದ ಕಲಂ 65(ಬಿ) ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಪುಟ ಸಂಖ್ಯೆ 320 ರಲ್ಲಿ ಚಾ,ಸಾ. 13 ರವರು ನೀಡಿದ ಕಲಂ 65 ಬಿ ಪ್ರಮಾಣ ಪತ್ರವಿದ್ದು ಅದನ್ನು ಈಗ ನಿಪಿ 41 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 41(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 321 ರಲ್ಲಿ ಚಾ,ಸಾ. 9 ಗುರುಪ್ರಸಾದ್ ರವರು

ನೀಡಿದ ಕಲಂ 65 ಬಿ ಪ್ರಮಾಣ ಪತ್ರವಿದ್ದು ಅದನ್ನು ಈಗ ನಿಪಿ 42 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 42(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಪುಟ ಸಂಖ್ಯೆ 322 ರಲ್ಲಿ ಚಾ,ಸಾ.12 ಮಂಜುನಾಥ ರಾವ್ ರವರು ನೀಡಿದ ಕಲಂ 65 ಬಿ ಪ್ರಮಾಣ ಪತ್ರವಿದ್ದು ಅದನ್ನು ಈಗ ನಿಪಿ 43 ಎಂತಲು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 43(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

15. ದಿಃ 20.08.2018 ರಂದು ತನಿಖೆಯನ್ನು ಪೂರ್ಣ ಗೊಳಿಸಿ ಆರೋಪಿಯ ವಿರುದ್ಧ ಅಭಿಯೋಜನಾ ಮಂಜೂರಾತಿಯನ್ನು ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಸಮುಚಿತ ಮಾರ್ಗದಲ್ಲಿ ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಅದು ಪುಟ ಸಂಖ್ಯೆ 14 ರಲ್ಲಿ ಇರುತ್ತದೆ.

16. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ. 19 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.